# ಕೆಲಸದ ಮೂಲಕ ಶಿಕ್ಷಣ (ಅಣಬೆ ಬೆಳೆಯುವುದು) ಮತ್ತು ಇತರ ವಿಷಯಗಳಿಗೆ ಅದರ ಸಂಬಂಧ



**ಸಹಾಬುದ್ದೀನ್ ಅನ್ಸಾರಿ**

**ಇಂದಿನ ಪ್ರಪಂಚದಲ್ಲಿ ಏಳಿಗೆ ಹೊಂದಲು ಕೌಶಲ್ಯಗಳು ಅತ್ಯಾವಶ್ಯಕ** – *ಸೈರಸ್ ವಕೀಲ್, ಅಧ್ಯಕ್ಷರು, ಪರೀಕ್ಷಾ ಸುಧಾರಣಾ ಮಂಡಳಿ*

ದಿನೇಶ್‌ಪುರ್ ಎಂಬುದು ಉಧಾಮ್ ಸಿಂಗ್ ನಗರ್ ಜಿಲ್ಲೆಯ ಒಂದು ಸಣ್ಣ ನ್ಯಾಯ ಪಂಚಾಯತಿ. ಅಲ್ಲಿ ಬಹುತೇಕ ಬೆಂಗಾಲಿಗಳೇ ವಾಸಿಸುತ್ತಾರೆ. ಇಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಮಕ್ಕಳ ಹಕ್ಕು ಅಧಿನಿಯಮವನ್ನು (ಆರ್.ಟಿ.ಇ.) ಜಾರಿಗೆ ತರುತ್ತಿರುವ ಅಜೀಂ ಪ್ರೇಮ್‌ಜಿ ಶಾಲೆಯನ್ನು 2012 ರಲ್ಲಿ ಸ್ಥಾಪಿಸಲಾಯಿತು.

ಈ ಶಾಲೆಯನ್ನು ಪ್ರಾರಂಭಿಸಿದಾಗ, ಶಿಕ್ಷಕರು ಇಲ್ಲಿನ ಸುತ್ತ-ಮುತ್ತಲ ಎಲ್ಲ ಸ್ಥಳಗಳಿಗೆ ಭೇಟಿ ಕೊಟ್ಟು ಅಲ್ಲಿನ ಸಮುದಾಯಕ್ಕೆ ಶಾಲೆಯ ಬಗ್ಗೆ ಮಾಹಿತಿ ನೀಡಿದರು. ಈ ರೀತಿಯ ಆ ಪ್ರದೇಶದ ಭೇಟಿಯಲ್ಲಿ ನಮಗೆ ತಿಳಿದ ವಿಷಯವೆಂದರೆ ಅಲ್ಲಿ ವಾಸಿಸುತ್ತಿರುವವರು ಬಹುತೇಕ ಮಂದಿ ಕೂಲಿ ಕಾರ್ಮಿಕರು ಎಂದು. ಕೆಲವರಿಗೆ ಸಿಡ್ಕುಲ್ (SIDCUL) ಉದ್ಯೋಗ ನೀಡಿತ್ತು. ಹೆಂಗಸರು ಮತ್ತು ಮಕ್ಕಳು ತಮ್ಮ ಮನೆಯಲ್ಲಿ ಬೀಡಿ ಕಟ್ಟುತ್ತಿದ್ದರು, ಇತರರು ಹೊಲಗಳಲ್ಲಿ ಕೆಲಸ ಮಾಡುತ್ತಿದ್ದರು ಅಥವಾ ತರಕಾರಿ ಮಾರುತ್ತಿದ್ದರು. ನಮ್ಮ ಶಾಲೆಯ ಮಕ್ಕಳು ಸಹ ಮಾಂಸದ ಅಂಗಡಿ ಅಥವಾ ಗ್ಯಾರೇಜ್ ಇತ್ಯಾದಿ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದರು. ಇನ್ನೂ ಕೆಲ ಮಕ್ಕಳು ತರಕಾರಿ ಬೆಳೆಯಲು ಮತ್ತು ಅವುಗಳನ್ನು ಶನಿವಾರದ ಸಂತೆಯಲ್ಲಿ ಮಾರಾಟ ಮಾಡಲು ತಂದೆ-ತಾಯಿಗೆ ನೆರವಾಗುತ್ತಿದ್ದರು. ಇಂತಹ ಮಕ್ಕಳ ಪೋಷಕರು ಹೇಳಿಕೊಳ್ಳುವಂಥಾ ವಿದ್ಯಾವಂತರೇನೂ ಆಗಿರಲಿಲ್ಲ.

ನನಗೆ ನನ್ನ ಆಹಾರ ಸಂಸ್ಕರಣೆ ಕಾರ್ಖಾನೆ ನಡೆಸುವುದರಲ್ಲಿ ಹಾಗೂ ಅಣಬೆಗಳ ಕೃಷಿಯಲ್ಲಿ ಎಂಟು-ಹತ್ತು ವರ್ಷಗಳ ಅನುಭವವಿದೆ. ಒಮ್ಮೆ ಶಾಲೆಯ ಮುಖ್ಯೋಪಾಧ್ಯಾಯರ ಬಳಿ ಮಾತನಾಡುವಾಗ ಅವರಿಗೆ ನನ್ನ ಬಗ್ಗೆ ಸ್ವಲ್ಪ ಮಾಹಿತಿ ನೀಡಿದೆ. ಆಗ ಮುಖ್ಯೋಪಾಧ್ಯಾಯರು ಮಕ್ಕಳಿಗೆ ಅವರ ಶಿಕ್ಷಣದ ಜೊತೆಜೊತೆಗೆ ಹೊಸತೊಂದು ವಿಷಯ ಕಲಿಸುವಂತಹ ಯಾವುದಾದರೂ ಚಟುವಟಿಕೆಯನ್ನು ನಡೆಸಿಕೊಡಿ ಎಂದು ನನಗೆ ಸಲಹೆ ನೀಡಿದರು. ಅವರು ನಯೀ ತಾಲೀಮ್ (ಹೊಸ ಶಿಕ್ಷಣದ)ಬಗ್ಗೆ ಮತ್ತು ಶಿಕ್ಷಣದಲ್ಲಿ ಕೆಲಸ ಕಲಿಸುವುದರ ಬಗ್ಗೆ ಹೇಳಿದರು. ಆಗ ನಾನು ಮಕ್ಕಳೊಡಗೂಡಿ ಅಣಬೆಗಳನ್ನು ಬೆಳೆಯುವ ಯೋಜನೆ ಮಾಡುವ ಆಲೋಚನೆಯನ್ನು ಅವರ ಮುಂದಿಟ್ಟೆ. ಇದರ ಬಗ್ಗೆ ನನ್ನ ಸಹೋದ್ಯೋಗಿಗಳೊಂದಿಗೆ ಕೂಡಾ ಚರ್ಚಿಸಿದೆ. ಅವರಿಂದಲೂ ಅನೇಕ ಸಲಹೆ-ಸೂಚನೆಗಳು ದೊರಕಿದವು. ನಂತರ ಮಕ್ಕಳ ಬಳಿ ಇದರ ಪ್ರಸ್ತಾಪ ಮಾಡಿದಾಗ ಅವರು ಉತ್ಸಾಹದಿಂದ ಈ ಚಟುವಟಿಕೆಯಲ್ಲಿ ಭಾಗವಹಿಸಲು ಮುಂದಾದರು.

## ಗಾಂಧೀಜಿ ಮತ್ತು ನಯೀ ತಾಲೀಮ್ (ಹೊಸ ಶಿಕ್ಷಣ)

ನಯೀ ತಾಲೀಮ್‌ಗೆ ಬುನಾದಿ ಹಾಕಿದವರು ಗಾಂಧೀಜಿ. ನಮ್ಮ ದೇಶದಲ್ಲಿ ಬಹುತೇಕ ಮಂದಿ ಹಳ್ಳಿಗಳಲ್ಲಿ ವಾಸಿಸುವುದರಿಂದ ಮಕ್ಕಳು ತರಗತಿಯಲ್ಲಿ ಏನನ್ನು ಕಲಿಯುತ್ತಾರೋ ಅದು ಅವರ ನಿಜಜೀವನದಲ್ಲೂ ಪ್ರಾಯೋಗಿಕವಾಗಿ ಉಪಯುಕ್ತವಾಗಬೇಕು ಎಂಬುದು ಅವರ ನಂಬಿಕೆಯಾಗಿತ್ತು. ಅದರಂತೆ ಕರಕುಶಲ ಕಸುಬು ಆಧಾರಿತ ಶಿಕ್ಷಣಕ್ಕೆ ಅವರು ಒತ್ತು ಕೊಟ್ಟರು. ಇದರಿಂದ ಶಿಕ್ಷಣವು ಕೆಲಸದ ತರಬೇತಿಗಾಗಿ ಮಾತ್ರ ಆಗಬೇಕೆಂದು ತಮ್ಮ ಇಂಗಿತವಲ್ಲ, ಕೆಲಸದ ಮೂಲಕ ಎಲ್ಲಾ ತರಹದ ವಿಷಯಗಳನ್ನು ಕಲಿಸಿಕೊಡಬೇಕೆಂದು ಅವರು ಇಚ್ಛಿಸಿದ್ದರು. ಮಕ್ಕಳ ಕಲಿಕೆಯಲ್ಲಿ ಇತಿಹಾಸ, ಭೂಗೋಳಶಾಸ್ತ್ರ, ಗಣಿತ, ವಿಜ್ಞಾನ, ಭಾಷೆ, ಕಲೆ, ಸಂಗೀತ ಎಲ್ಲವೂ ಒಳಗೊಂಡಿರಬೇಕು ಎಂಬುದು ಅವರ ಕಾರ್ಯತಂತ್ರವಾಗಿತ್ತು. ಶಿಕ್ಷಣ ಪುಸ್ತಕದ ಜ್ಞಾನಕ್ಕೆ ಮಾತ್ರ ಸೀಮಿತವಾಗಬಾರದು, ನಿತ್ಯ ಜೀವನದ ಚಟುವಟಿಕೆಗಳನ್ನು ಒಳಗೊಂಡಿರಬೇಕು ಕೆಲಸ ಮತ್ತು ಚಟುವಟಿಕೆಗಳ ಮೂಲಕ ಜ್ಞಾನವನ್ನು ಪಡೆಯಬೇಕು ಎಂಬುದು ಅವರ ಅಭಿಪ್ರಾಯವಾಗಿತ್ತು.

ಶ್ರದ್ಧೆಯ ದುಡಿಮೆ ಮತ್ತು ಶ್ರಮಗಳನ್ನು ನಮ್ಮ ಜೀವನದ ಒಂದು ಅವಿಭಾಜ್ಯ ಅಂಗವಾಗಿ ರೂಢಿಸಿಕೊಳ್ಳಬೇಕು. ಕಣ್ನೋಟದ ಕಲಿಕೆಯಲ್ಲಿ ಕೇವಲ ಅವಲೋಕನ ಮಾಡುವುದು, ಪರೀಕ್ಷೆ ಮಾಡುವುದು ಇರುತ್ತದೆ, ನಮ್ಮ ಸ್ವಂತ ಕೈಗಳಿಂದ ಕಠಿಣ ದುಡಿಮೆ ಮಾಡಿದಾಗ, ನಾವು ಸಮಾಜಕ್ಕೆ ಅನುಕೂಲಕರವಾದ

ಪ್ರಾಯೋಗಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಮಾತ್ರವೇ ಬುದ್ಧಿ ಮತ್ತು ಭಾವನೆಗಳ ನಿಜವಾದ ಬೆಳವಣಿಗೆ ಆಗುತ್ತದೆ ಎಂಬುದು ಅವರ ವಿಚಾರವಾಗಿತ್ತು.

## ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF – ಎನ್‌ಸಿಎಫ್) – 2005

ಎನ್‌ಸಿಎಫ್ 2005, ದೇಶದ ಪ್ರತಿಯೊಬ್ಬ ಪ್ರಜೆಯೂ ದೇಶದ ಆರ್ಥಿಕತೆಗೆ ಕೊಡುಗೆ ನೀಡಲು ಸಾಧ್ಯ ಮಾಡುವಂತಹ ಸ್ವಂತ ಕೈಗಳಿಂದ ದುಡಿಮೆ ಮಾಡುವುದನ್ನೊಳಗೊಂಡ ಶಿಕ್ಷಣವನ್ನು ನೀಡುವುದರ ಬಗ್ಗೆ ಹೇಳುತ್ತದೆ.

ಈ ರಾಷ್ಟ್ರೀಯ ವಿಷಯಕೇಂದ್ರಿತ ಗುಂಪಿನ ವಿಚಾರಗಳು ಹೀಗಿವೆ:

- ಕರಕುಶಲ ಕಲೆಯು ಭಾರತ ದೇಶದ ಸಂಸ್ಕೃತಿ, ಸೌಂದರ್ಯ ಮತ್ತು ಅರ್ಥವ್ಯವಸ್ಥೆಯ ಅವಿಭಾಜ್ಯ ಅಂಗವಾಗಿರುವುದರಿಂದ ಅದನ್ನು ಪ್ರತ್ಯೇಕ ವಿಷಯವಾಗಿ ಬೋಧಿಸಬಾರದು. ಅದರ ಬದಲು ಇತಿಹಾಸ, ಸಮಾಜ ಶಾಸ್ತ್ರ, ಪರಿಸರ ವಿಜ್ಞಾನ, ಭೂಗೋಳಶಾಸ್ತ್ರ, ಕಲೆ ಮತ್ತು ಅರ್ಥಶಾಸ್ತ್ರದೊಂದಿಗೆ ಸಂಬಂಧ ಕಲ್ಪಿಸಿ ಬೋಧಿಸಬೇಕು.
- ವಿದ್ಯಾರ್ಥಿಯು ಮುಂದೆ ಯಾವ ವಿಷಯ ಅಥವಾ ವೃತ್ತಿಯನ್ನು ಆಯ್ದುಕೊಂಡರೂ, ತನ್ನ ಸ್ವಂತ ಕೈಗಳಿಂದ ಮಾಡಿದ ಕರಕುಶಲ ಕೆಲಸದ ಮಾಧ್ಯಮದ ಮೂಲಕ ಪಡೆದ ಅನುಭವವು ಕಲಿಕೆಯ ಪ್ರಕ್ರಿಯೆಯಲ್ಲಿ ಅವನಿಗೆ ಬಹಳ ಸಹಾಯಮಾಡುತ್ತದೆ. ಕೈಯ್ಯಾರೆ ಕೆಲಸ ಮಾಡುವುದು, ವಸ್ತುಗಳು ಮತ್ತು ತಂತ್ರಗಳು ಪ್ರಕ್ರಿಯೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ.
- ಗ್ರಾಮೀಣ ಪ್ರದೇಶಗಳಲ್ಲಿ ಕರಕುಶಲ ಕಲೆಗೆ ಬೇರೆಯದೇ ಪಠ್ಯಕ್ರಮವನ್ನು ಅಳವಡಿಸಬೇಕು. ಇದರಿಂದ ಈಗಾಗಲೇ ಅಲ್ಲಿ ಪ್ರಚಲಿತವಿರುವ ವ್ಯಾಪಾರ, ತಾಂತ್ರಿಕ ಶಿಕ್ಷಣ, ಭಾಷಾ ನೈಪುಣ್ಯ, ಲೆಕ್ಕಶಾಸ್ತ್ರ, ಮಾರಾಟಕ್ರಮ ಮತ್ತು ಪ್ಯಾಕು ಮಾಡುವುದು ಮುಂತಾದವುಗಳನ್ನು ಮತ್ತಷ್ಟು ಅಭಿವೃದ್ಧಿಗೊಳಸಬಹುದು. ನಗರ ಪ್ರದೇಶಗಳಲ್ಲಿ ಕರಕುಶಲ ಕಲಿಕೆಯನ್ನು ಐಚ್ಛಿಕ ಅನುಭವದಂತೆ ಮತ್ತು ಸೃಜನಾತ್ಮಕ ವಿಷಯ ಗ್ರಹಿಕೆಗಾಗಿ ನೀಡಬೇಕು.

**ಅಣಬೆ ಕೃಷಿಯನ್ನೇ ನಮ್ಮ ಚಟುವಟಿಕೆಯಾಗಿ ಏಕೆ ಆಯ್ಕೆ ಮಾಡಿಕೊಂಡೆವು?** ನಮ್ಮ ಶಾಲೆಯಲ್ಲಿ ಆರನೆಯ ತರಗತಿಯಲ್ಲಿ ಇದ್ದ ಒಟ್ಟು ಇಪ್ಪತ್ತೊಂಭತ್ತು ವಿದ್ಯಾರ್ಥಿಗಳ ಪೈಕಿ ಇಪ್ಪತ್ತೈದು ಮಕ್ಕಳ ತಂದೆ-ತಾಯಂದಿರು ಹೊಲಗಳಲ್ಲೊ ಅಥವಾ ಬೇರೆಲ್ಲೋ ದಿನಗೂಲಿ ಮಾಡುವ ಕೆಲಸಗಾರರಾಗಿದ್ದರು. ಓರ್ವ ವಿದ್ಯಾರ್ಥಿಯ ತಂದೆ ವೈದ್ಯರು ಹಾಗೂ ಇನ್ನೊಬ್ಬರು ಶಿಕ್ಷಕರಾಗಿದ್ದರು. ಇನ್ನುಳಿದ ಮೂವರಲ್ಲಿ ಇಬ್ಬರು ರೈತರು ಹಾಗು ಒಬ್ಬಾತ ಅಂಗಡಿ ಇಟ್ಟುಕೊಂಡಿದ್ದರು.

ದಿನೇಶ್‌ಪುರದ ಮಕ್ಕಳಿಗೆ ಲಭ್ಯ ಪರಿಸ್ಥಿತಿ ಹೀಗಿತ್ತು:

- ಅಣಬೆ ಕೃಷಿ ಮಾಡುವುದರಲ್ಲಿ ತರಬೇತಿ ಹೊಂದಿದ್ದ ಮತ್ತು ಅನುಭವವಿದ್ದ ಒಬ್ಬ ಶಿಕ್ಷಕರಿದ್ದರು.
- ಅವರಿಗೆ ವ್ಯವಸಾಯ ಮಾಡುವಷ್ಟು ಸ್ಥಳ ಲಭ್ಯವಿರಲಿಲ್ಲ.
- ಹುಲ್ಲು ಮತ್ತು ಸಗಣಿಗೊಬ್ಬರ ಸುಲಭವಾಗಿ ದೊರೆಯುತ್ತಿತ್ತು.
- ಅಣಬೆ ಕೃಷಿಗೆ ಪೂರಕವಾದ ಹದಿನೇಳರಿಂದ ಹದಿನೆಂಟು ಡಿಗ್ರಿ ಸೆಲ್ಸಿಯಸ್ ವರೆಗಿನ ತಾಪಮಾನ ಅಲ್ಲಿತ್ತು.
- ಅಕ್ಟೋಬರ್ ತಿಂಗಳಿಂದ ಮಾರ್ಚಿನವರೆಗೆ ಅಣಬೆ ಕೃಷಿ ಮಾಡಲು ಸಮಯ ಪ್ರಶಸ್ತವಾಗಿರುತ್ತದೆ.

**ಅಣಬೆ ಕೃಷಿ ಮಾಡುವುದರಿಂದ ಸಿಗುವ ಪ್ರಯೋಜನಗಳು**

- ಅಣಬೆ ಬೆಳೆಯಲು ತೀರಾ ವಿಶಾಲ ಜಾಗದ ಅವಶ್ಯಕತೆ ಇಲ್ಲ. ಒಂದು ಸಣ್ಣ ಕೊಠಡಿಯಲ್ಲಿ ಸಹ ಬೆಳೆಯಬಹುದು.
- ಹೊಲಗಳಲ್ಲಿ ಉತ್ಪಾದಿತವಾದ ತ್ಯಾಜ್ಯ ಪದಾರ್ಥಗಳನ್ನು ಮತ್ತೆ ಉಪಯೋಗಿಸಿಕೊಂಡು ಅಣಬೆ ಬೆಳೆಯಬಹುದು.
- ಮನೆಯ ಎಲ್ಲ ಸದಸ್ಯರೂ ಈ ಕೃಷಿಯಲ್ಲಿ ಕೈಜೋಡಿಸಬಹುದು.
- ಅಣಬೆ ಕೃಷಿಯನ್ನು ಕೇವಲ ಐದು ನೂರು ರೂಪಾಯಿಗಳ ಬಂಡವಾಳದಿಂದ ಪ್ರಾರಂಭಿಸಬಹುದು.
- ಬೆಳೆದ ಅಣಬೆಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ಅದರಿಂದ ಗಳಿಸಿದ ಹಣದಲ್ಲಿ ಇತರೆ ಅಗತ್ಯ ವಸ್ತುಗಳನ್ನು ಖರೀದಿಸಬಹುದು.
- ಅಣಬೆಗಳನ್ನು ಮಕ್ಕಳು ಪ್ರತಿದಿನ ಸೇವಿಸಬಹುದು. ಇದರಿಂದ ಅವರ ದೇಹಕ್ಕೆ ಬೇಕಾದಷ್ಟು ಪ್ರೋಟೀನ್ ದೊರೆಯುತ್ತದೆ.
- ಕಾಂಪೋಸ್ಟ್ (ಮಿಶ್ರಗೊಬ್ಬರ)ವನ್ನು ಹೊಲ-ಗದ್ದೆ ಹಾಗೂ ತೋಟಗಳಿಗೆ ಗೊಬ್ಬರದಂತೆ ಮತ್ತೆ ಬಳಸಬಹುದು.
- ಅಣಬೆ ಕೃಷಿಗೆ ದಿನವಿಡೀ ದುಡಿಯುವ ಅವಶ್ಯಕತೆ ಇಲ್ಲ.

| ಅಣಬೆ ಕೃಷಿ ಮತ್ತು ಇತರ ವಿಷಯಗಳೊಂದಿಗೆ ಅದರ ಸಂಬಂಧ | |
|---|---|
| 1. ಗಣಿತದೊಂದಿಗೆ ಸಂಬಂಧ<br>• ಲಾಭ ಮತ್ತು ನಷ್ಟ<br>• ವರಮಾನ ಮತ್ತು ವೆಚ್ಚ<br>• ದತ್ತಾಂಶ ಮಾಹಿತಿ (ಡೇಟಾ) ವಿಶ್ಲೇಷಣೆ<br>• (ಮಾರುಕಟ್ಟೆ ದರ) ಪರಿವರ್ತನೆ<br>• ವಿಸ್ತೀರ್ಣ<br>• ಘಟಕವಾರು ಲೆಕ್ಕ (ಉದಾಹರಣೆಗೆ ಇನ್ನೂರು ಗ್ರಾಮಿನ ಬೆಲೆ ಇಪ್ಪತ್ತು ರೂಪಾಯಿ ಆದರೆ, ಸಾವಿರ ಗ್ರಾಮಿಗೆ ಎಷ್ಟಾಗುತ್ತದೆ ಎಂಬ ರೀತಿಯ ಲೆಕ್ಕಾಚಾರ)<br>• ಸರಾಸರಿ ಲೆಕ್ಕ<br>• ಲೆಕ್ಕಾಚಾರ (ಕೂಡಿಸುವುದು, ಕಳೆಯುವುದು, ಗುಣಾಕಾರ, ಭಾಗಾಕಾರ) | 2. ವಿಜ್ಞಾನದೊಂದಿಗೆ ಸಂಬಂಧ<br>• ನವೀಕರಣ ಮತ್ತು ನವೀಕರಿಸದಿರುವುದು<br>• ಪರಾವಲಂಬಿಗಳು(ಮೃತ ಅಥವಾ ಜೀವಂತ)<br>• ಸಸ್ಯಗಳು ಮತ್ತು ಪ್ರಾಣಿಗಳು<br>• ಸಸ್ಯಹರಿತ್ತು<br>• ಸಮೀಕ್ಷೆ<br>• ಜಿಪ್ಸಮ್ಮಿನ ಪಿ ಹೆಚ್ ಮೌಲ್ಯ (pH value) ಮತ್ತು ಫಾರ್ಮಲಿನ್ ಏಕೆ ಸೇರಿಸುತ್ತಾರೆ.<br>• ಹುದುಗು ಬರಿಸುವುದು<br>• ಪೆನ್ಸಿಲಿನ್ನಿನ ಆವಿಷ್ಕಾರ ಇತ್ಯಾದಿ<br>• ತಾಪಮಾನದ ಮಾಪನ<br>• ಉಷ್ಣತೆ<br>• ಉಪಕರಣಗಳು<br>• ಅಳತೆಯ ಯೂನಿಟ್ಟುಗಳು<br>• ಡಿಗ್ರಿ ಸೆಂಟಿಗ್ರೇಡ್ ಮತ್ತು ಡಿಗ್ರಿ ಫ್ಯಾರನ್ಹೀಟ್ ಉಷ್ಣಾಂಶದ ಪರಿವರ್ತನೆ. |
| 3. ಭೂಗೋಳ ದೊಂದಿಗೆ ಸಂಬಂಧ<br>• ಹವಾಮಾನ ಮತ್ತು ವಾಯುಗುಣ<br>• ತಾಪಮಾನ<br>• ಜಿಪ್ಸಮ್ ಅನ್ನು ಎಲ್ಲಿಂದ ಪಡೆಯಬಹುದು | 4. ಚರಿತ್ರೆಯೊಂದಿಗೆ ಸಂಬಂಧ<br>• ಅಣಬೆಗಳ ಉಗಮ ಹೇಗೆ ಆಯಿತು?<br>• ಅಣಬೆಗಳ ಚರಿತ್ರೆ<br>• ಆಹಾರ ಮತ್ತು ಪಾನೀಯ |
| 5. ಭಾಷೆ ಯೊಂದಿಗೆ ಸಂಬಂಧ<br>• ಗಮನವಿಟ್ಟು ಕೇಳುವ ಕಲೆ<br>• ಮಾತನಾಡುವುದು<br>• ಬರೆಯುವುದು<br>• ಓದುವುದು<br>• ಪ್ರಶ್ನಿಸುವುದು | 6. ಆಹಾರ ಮತ್ತು ಪೌಷ್ಟಿಕಾಹಾರ |
| 7. ಮಾರಾಟ ಮಾಡುವುದು ಮತ್ತು ಪ್ಯಾಕು ಮಾಡುವುದು | 8. ವೃತ್ತಿ ಮತ್ತು ಉದ್ಯೋಗ – ಅಣಬೆ ಕೃಷಿಯನ್ನು ಯಾರು ಬೇಕಾದರೂ (ಸ್ತ್ರೀ ಅಥವಾ ಪುರುಷರು) ಒಬ್ಬರೇ ಅಥವಾ ಒಟ್ಟಾಗಿ ಗುಂಪಿನಲ್ಲಿ ಮಾಡಬಹುದು. ಇದಕ್ಕೆ ಹೆಚ್ಚು ಬಂಡವಾಳದ ಅವಶ್ಯಕತೆ ಇಲ್ಲ. ಅತ್ಯಂತ ಕಡಿಮೆ ಖರ್ಚಿನಲ್ಲಿ ಪ್ರಾರಂಭಿಸಬಹುದು. ಆದಾಗ್ಯೂ ಇದರಿಂದ ಲಾಭ ಗಳಿಸಬಹುದು. |
| 9. ವಾಯುಗುಣ – ಅಣಬೆ ಕೃಷಿಗೆ ತಂಪು ವಾತಾವರಣ ಅವಶ್ಯ. ಆದ್ದರಿಂದ ಅಣಬೆ ಕೃಷಿಯನ್ನು ಅಕ್ಟೋಬರ್ ತಿಂಗಳಿಂದ ಮಾರ್ಚ್ ತಿಂಗಳವರೆಗೆ ಮಾಡಬಹುದು. | 10. ಅಣಬೆ ಉತ್ಪಾದನಾ ಕೇಂದ್ರ ಪಂತನಗರ ಹಾಗು ತರೈ ಫುಡ್ಸ್ ಲಿಮಿಟೆಡ್‌ನಂತಹ ಕೆಲವು ಸಂಸ್ಥೆಗಳಿಂದ ಸಲಹೆ ಮತ್ತು ಕಾಂಪೋಸ್ಟ್ (ಮಿಶ್ರ ಗೊಬ್ಬರವನ್ನು) ಪಡೆದುಕೊಳ್ಳಬಹುದು.ಇಂತಹ ಕೇಂದ್ರಗಳು ದಿನೇಶ್‌ಪುರದಿಂದ ಕೇವಲ ಹನ್ನೆರಡರಿಂದ ಹದಿನೈದು ಕಿಲೋಮೀಟರ್ ದೂರದಲ್ಲಿವೆ. ಇದಲ್ಲದೆ ರುದ್ರಪುರ ಮತ್ತು ಹಲ್ದಾನಿ ಅಣಬೆಗಳಿಗೆ ಒಳ್ಳೆಯ ಮಾರುಕಟ್ಟೆಗಳಾದ್ದರಿಂದ, ದಿನೇಶ್‌ಪುರದಿಂದ ವ್ಯಾಪಾರ ಮಾಡುವುದು ಸುಲಭ. |

## ಅಣಬೆ ಕೃಷಿಯ ಬಗ್ಗೆ ಕೆಲ ಮಾಹಿತಿ

ಅಣಬೆ ಕೃಷಿಯನ್ನು ಪ್ರಾರಂಭಿಸುವ ಮೊದಲು, ನಾವು ಮಕ್ಕಳೊಂದಿಗೆ ಒಂದು ಸಾಮಾನ್ಯ ಚರ್ಚೆಯನ್ನು ನಡೆಸಿ ಅವರಿಗೆ ಅಣಬೆ ಕೃಷಿಯನ್ನು ನಾವು ಪ್ರಾರಂಭಿಸಬೇಕೆಂದಿದ್ದೇವೆ ಎಂದು ತಿಳಿಸಿದೆವು. ನೀವು ಈ ಮೊದಲು ಅಣಬೆಗಳನ್ನು ನೋಡಿದ್ದೀರಾ? ಬೆಂಗಾಲಿ ಭಾಷೆಯಲ್ಲಿ ಅಣಬೆಯನ್ನು ಏನೆಂದು ಕರೆಯುತ್ತಾರೆ? ಇನ್ನೂ ಮುಂತಾಗಿ ಅವರನ್ನು ಪ್ರಶ್ನಿಸಿದೆವು. ಮಕ್ಕಳು ಹೌದು ನಾವು ಅಣಬೆಯನ್ನು ನೋಡಿದ್ದೇವೆ ಆದರೆ ಎಂದೂ ಸೇವಿಸಿಲ್ಲ ಎಂದರು. ಅವು ಮಾರುಕಟ್ಟೆಯಲ್ಲಿ ಸಿಗುತ್ತವೆಯೇ ಎಂದು ಕೇಳಿದರು. ಅದರ ಜೊತೆ ಜೊತೆಗೆ ಈ ಕೆಳಗಿನ ಪ್ರಶ್ನೆಗಳನ್ನು ಸಹ ಕೇಳಿದರು.

- ಅಣಬೆ ಎಲ್ಲಿ ಬೆಳೆಯುತ್ತದೆ?
- ಅವು ಹೇಗೆ ಬೆಳೆಯುತ್ತವೆ?
- ಮಣ್ಣಿಲ್ಲದೆ ಅಣಬೆಯನ್ನು ಹೇಗೆ ಬೆಳೆಸಲು ಸಾಧ್ಯ?
- ಅಣಬೆಗಳು ಪ್ರಾಣಿಗಳೇ?
- ಒಣಹುಲ್ಲಿನೊಂದಿಗೆ ಬೇರೆ ಏನನ್ನು ಸೇರಿಸುತ್ತಾರೆ?
- ಅಣಬೆಗಳು ಯಾವಾಗಲೂ ಏಕೆ ಬೆಳ್ಳಗಿರುತ್ತವೆ?

- ಅವುಗಳ ರುಚಿ ಹೇಗಿರುತ್ತದೆ?
- ಅಣಬೆಗಳ ಆಕಾರ ಏಕೆ ಹಾಗೆ ಇರುತ್ತದೆ.
- ಅಣಬೆಗಳ ಒಳಗೆ ಏನಿರುತ್ತದೆ?
- ಆ ಕಾಂಪೋಸ್ಟ್ ಗೊಬ್ಬರವನ್ನು ಮರು ಬಳಕೆ ಮಾಡಬಹುದೇ?

### ಅಣಬೆ ಕೃಷಿಗೆ ತಯಾರಿ

ಅಣಬೆ ಕೃಷಿ ಬಗ್ಗೆ ಶಾಲೆಯ ಉಪಾಧ್ಯಾಯರ ಬಳಿ ಚರ್ಚಿಸಿದಾಗ, ನಮಗೆ ಎದುರಾದ ದೊಡ್ಡ ಸಮಸ್ಯೆ ಎಂದರೆ ಅದನ್ನು ಎಲ್ಲಿ ಬೆಳೆಯುವುದು? ಎಂಬುದು. ಶಾಲೆಯ ಆವರಣದಲ್ಲಿ ಸಾಕಷ್ಟು ಜಾಗ ಇದ್ದರೂ ಸಹ ನಾವು ಸೂಕ್ತವಾದ ಸ್ಥಳವನ್ನು ಹುಡುಕತೊಡಗಿದೆವು. ಎಲ್ಲರೂ ತಮ್ಮ ತಮ್ಮ ಸಲಹೆಗಳನ್ನು ನೀಡಿದರು. ಕಡೆಗೆ ಶಾಲೆಯ ಮೂಲೆಯೊಂದು ಪ್ರಶಸ್ತವಾದ ಸ್ಥಳ ಎಂದು ನಿರ್ಧರಿಸಿದೆವು. ನಂತರ ಆಯ್ಕೆ ಮಾಡಿದ ಸ್ಥಳವನ್ನು ನಾಲ್ಕು ದಿಕ್ಕುಗಳಿಂದಲೂ ಸೂರ್ಯನ ಕಿರಣಗಳು ಒಳಗೆ ಬಾರದಂತೆ ಹೇಗೆ ಮರೆ ಮಾಡಬೇಕೆಂಬುದರ ಬಗ್ಗೆ ಆಲೋಚಿಸಿದೆವು. ಒಂದು ದೊಡ್ಡ ಮೇಜನ್ನು ತಂದು, ಅದನ್ನು ಪಾಲಿಥಿನ್ ಕವರಿನಿಂದ ಮುಚ್ಚಿ ಒಂದು ಕೊಠಡಿಯ ತರಹ ಮಾಡಿದೆವು. ಈ ಕೆಲಸವನ್ನು ಶಿಕ್ಷಕರ ಮತ್ತು ಮಕ್ಕಳ ಸಹಾಯದಿಂದ ಎರಡು ಗಂಟೆಗಳ ಕಾಲದಲ್ಲಿ ಮಾಡಿ ಮುಗಿಸಿದೆವು. ಈಗ ಅಣಬೆಗಳನ್ನು ಬೆಳೆಯಲು ಸ್ಥಳ ಸಿದ್ಧವಾಯಿತು.



*ಬೀಜಗಳನ್ನು (spawn) ಮಿಶ್ರಣ ಮಾಡುವ ಮೊದಲು ಮಾಡಿಕೊಳ್ಳುವ ತಯಾರಿ.*

### ಕಾಂಪೋಸ್ಟ್ ಮತ್ತು ಬೀಜಗಳ(spawn) ಖರೀದಿ

ಕಾಂಪೋಸ್ಟ್ ಮತ್ತು ಬೀಜಗಳ ಖರೀದಿಯನ್ನು ಡಿಸೆಂಬರ್ ತಿಂಗಳಲ್ಲಿ ಆರಂಭಿಸಿದೆವು. ದಿನೇಶ್‌ಪುರದಿಂದ ಹನ್ನೆರಡು ಕಿಲೋಮೀಟರ್ ದೂರದಲ್ಲಿ ತರೈ ಫುಡ್ಸ್ ಲಿಮಿಟೆಡ್ ಎಂಬಲ್ಲಿ ವರ್ಷವಿಡೀ ಅಣಬೆಗಳನ್ನು ಬೆಳೆಸುತ್ತಾರೆ. ನಾವು ಐವತ್ತು ಕಿಲೋ ಕಾಂಪೋಸ್ಟ್ ಗೊಬ್ಬರ ಹಾಗು ಒಂದು ಪ್ಯಾಕೆಟ್ ಮೊಟ್ಟೆಗಳನ್ನು ಖರೀದಿಸಿದೆವು. ಮಾರನೆಯ ದಿನ ಮಕ್ಕಳ ಜೊತೆಗೂಡಿ ಅವೆರಡನ್ನೂ ಬೆರೆಸಿ ವೃತ್ತಪತ್ರಿಕೆಗಳಿಂದ ಸುತ್ತಿಟ್ಟೆವು. ಮಕ್ಕಳಿಗೆ ವೃತ್ತಪತ್ರಿಕೆಗಳನ್ನು ಒಣಗದಂತೆ ನೋಡಿಕೊಳ್ಳಲು ಹೇಳಿದೆವು. ಇಲ್ಲವಾದರೆ ಅದರ ಅಡಿಯಲ್ಲಿರುವ ಮಿಶ್ರಣ ಸಹ ಒಣಗಿಹೋಗುವುದು ಎಂದು ತಿಳಿಹೇಳಿದೆವು. ಮಕ್ಕಳು ಇದರ ಬಗ್ಗೆ ಪ್ರತಿದಿನ ಕಾಳಜಿ ವಹಿಸುತ್ತಿದ್ದರು. ಒಂದು ವೇಳೆ ಅವರಿಗೆ ವೃತ್ತಪತ್ರಿಕೆಗಳು ಒಣಗುತ್ತಿವೆ ಅನಿಸಿದರೆ ಅವುಗಳ ಮೇಲೆ ನೀರು ಚುಮುಕಿಸಿ ಅದನ್ನು ದಾಖಲು ಮಾಡುತ್ತಿದ್ದರು, ಎಷ್ಟು ಪ್ರಮಾಣದ ನೀರು ಹಾಕಿದೆವು ಎಂಬ ಮಾಹಿತಿಯನ್ನೂ ದಾಖಲಿಸುತಿದ್ದರು. ಬೀಜಗಳನ್ನು ಕಾಂಪೋಸ್ಟ್ ನೊಂದಿಗೆ ಬೆರೆಸಿದ ಇಪ್ಪತ್ತು ದಿನಗಳ ನಂತರ ಅದಕ್ಕೆ ಕೇಸಿಂಗ್ (ಒಂದೂವರೆ ವರ್ಷ ಹಳೆಯದಾದ ಸಗಣಿ ಗೊಬ್ಬರ) ಸೇರಿಸಿದೆವು. ಮಕ್ಕಳು ಈ ಪ್ರಕ್ರಿಯೆಯಲ್ಲಿ ಅತ್ಯಂತ ಉತ್ಸಾಹದಿಂದ ಪಾಲ್ಗೊಂಡರು. ನಮಗೆ ಯಾವ ರೀತಿಯ ಗೊಬ್ಬರದ ಅವಶ್ಯಕತೆ ಇದೆ ಎಂದು ಮಕ್ಕಳ ಬಳಿ ಹೇಳಿದರೆ, ಅವರು ಅಂಥದ್ದನ್ನು ತಮ್ಮ ಮನೆಯಿಂದ ತಂದು, ಅದನ್ನು ಬಳಸಿ ಕಾಂಪೋಸ್ಟ್ ತಯಾರಿಸುತಿದ್ದರು. ಜೊತೆಗೆ ನಮ್ಮನ್ನು ಅನೇಕ ಪ್ರಶ್ನೆಗಳನ್ನು ಸಹ ಕೇಳುತ್ತಿದ್ದರು. ಉದಾಹರಣೆಗೆ ನಾವು ಕೀಟನಾಶಕವನ್ನು ಏಕೆ ಉಪಯೋಗಿಸುತಿದ್ದೇವೆ? ಫಾರ್ಮಲಿನ್ ಅನ್ನು ಏಕೆ ಸೇರಿಸುತ್ತಿದ್ದೇವೆ? ಅದನ್ನು ಪಾಲಿಥೀನ್ ಕವರಿನಿಂದ ಏಕೆ ಮುಚ್ಚಬೇಕು? ಒಂದು ವೇಳೆ ಮುಚ್ಚದಿದ್ದರೆ ಏನಾಗುತ್ತದೆ? ಇತ್ಯಾದಿ.




*ಬೀಜಗಳನ್ನು ಮಿಶ್ರಣ ಮಾಡಿ, ಜಿಪ್ಸಮ್, ಕೀಟನಾಶಕ ಮತ್ತು ಫಾರ್ಮಲಿನ್ ಬೆರೆಸಿ ಕೇಸಿಂಗ್ ತಯಾರಿಸುತ್ತಿರುವುದು.*

ಒಮ್ಮೆ ಕೇಸಿಂಗನ್ನು ತಯಾರಿಸಿದ ನಂತರ ಅದಕ್ಕೆ ಒಂದಷ್ಟು ನೀರನ್ನು ಸೇರಿಸಿದೆವು. ನಾವು ಮಕ್ಕಳಿಗೆ ಅದರ ತೇವಾಂಶವನ್ನು ಕಾಪಿಟ್ಟುಕೊಳ್ಳಬೇಕು ಎಂದು ನಿರ್ದೇಶಿಸಿದೆವು. ತೇವಾಂಶ ತೀರಾ ಹೆಚ್ಚಾಗಿ ನೀರು ಹರಿದು ಹೋಗುವಂತೆ ಇರಬಾರದು. ಹಾಗೆಯೇ ತೀರಾ ಕಡಿಮೆಯಾಗಿ ಕೇಸಿಂಗ್ ಒಣಗಿ ಹೋಗಬಾರದು ಎಂದು ಸೂಚನೆ ಕೊಟ್ಟೆವು. ಒಂದು ವೇಳೆ

ಕೇಸಿಂಗ್ ಒಣಗಿ ಹೋದರೆ, ಕವಕಜಾಲ (mycelium) ಬೆಳೆಯುವುದಿಲ್ಲ ಹಾಗೊಂದು ವೇಳೆ ಬೆಳೆದರೂ ಅವು ಅಣಬೆಗಳಾಗಿ ಮಾರ್ಪಡುವುದಿಲ್ಲ. ಹೀಗಾಗಿ ಮಕ್ಕಳು ಪ್ರತಿದಿನ ಕೇಸಿಂಗ್ ಅನ್ನು ಗಮನಿಸುತ್ತಿದ್ದರು. ಅವಶ್ಯಕತೆ ಇದ್ದರೆ ನೀರು ಚಿಮುಕಿಸುತ್ತಿದ್ದರು, ಇದನ್ನು ನಾವು ಎಡೆಬಿಡದೆ ಮಾಡಿದೆವು. ಮಕ್ಕಳು ಅಣಬೆಗಳು ಯಾವಾಗ ಬೆಳೆಯುವುದೋ ಎಂದು ಕಾತರದಿಂದ ಎದುರು ನೋಡುತ್ತಿದ್ದರು. ಆದರೆ ಹದಿನೈದು ಇಪ್ಪತ್ತು ದಿನಗಳ ನಂತರವೂ ಕವಕಜಾಲ ಮೇಲೇಳಲೇ ಇಲ್ಲ. ಮಕ್ಕಳು ನನ್ನನ್ನು ಕುರಿತು ನೀವು ಅಣಬೆಗಳು ಇಷ್ಟರಲ್ಲೇ ಕಾಣಿಸಿಕೊಳ್ಳುತ್ತದೆ ಎಂದು ಹೇಳಿದ್ದಿರಿ. ಆದರೆ ಅವು ಏಕೆ ಮೇಲೇಳಲೇ ಇಲ್ಲ ಎಂದು ಪ್ರಶ್ನಿಸತೊಡಗಿದರು. ನನಗೂ ಇದರ ವಿಚಾರದಲ್ಲಿ ಕಳವಳ ಮೂಡಿತು. ಏಕೆಂದರೆ ನಾನು ಇದೇ ಮೊದಲ ಬಾರಿಗೆ ಮಕ್ಕಳೊಂದಿಗೆ ಬೆರೆತು ಅಣಬೆ ಬೆಳೆಯುವ ಪ್ರಯೋಗ ಮಾಡಿದ್ದೆ. ಒಂದು ವೇಳೆ ಅವು ಮೇಲೇಳದಿದ್ದರೆ ಮಕ್ಕಳಿಗೆ ನಿರಾಶೆಯಾಗುವುದರ ಜೊತೆಗೆ ನಮ್ಮ ಯೋಜನೆಯ ಮೇಲೆ ನಂಬಿಕೆ ಹೊರಟುಹೋಗುವ ಸಂಭವ ಇತ್ತು. ನಾನು ಕವಕಜಾಲ ಮೇಲೆಳದಿರಲು ಕಾರಣ ಕಂಡುಹಿಡಿಯಲು ಹೊರಟಾಗ, ಕೇಸಿಂಗ್‌ನಲ್ಲಿ ಫಾರ್ಮಲಿನ್ ಅಂಶ ಹೆಚ್ಚಾಗಿದ್ದುದು ನನಗೆ ಅರ್ಥವಾಯಿತು. ಆಗ ನಾನು ಕೇಸಿಂಗನ್ನು ನೀರಿನಿಂದ ತೊಳೆದು ಮತ್ತೆ ಅದನ್ನು ಕಾಂಪೋಸ್ಟ್‌ನೊಂದಿಗೆ ಮಿಶ್ರಣಮಾಡಿದೆ. ಇದಾದ ಹದಿನೈದು ದಿನಗಳಲ್ಲಿ ನಾವು ಅಣಬೆಗಳು ಮೇಲೇಳುವುದನ್ನು ಗಮನಿಸಿದೆವು. ಆಗ ಮಕ್ಕಳ ಉತ್ಸಾಹ ನೋಡುವುದೇ ಒಂದು ಚಂದ. ಒಂದರಿಂದ ಆರನೆಯ ತರಗತಿಯ ಮಕ್ಕಳು ಪೈಪೋಟಿಗೆ ಬಿದ್ದು ನಾ ಮುಂದು ತಾ ಮುಂದು ಎಂದು ಬಂದು ಎಷ್ಟು ಅಣಬೆಗಳು ಬೆಳೆದಿವೆ ಎಂದು ಎಣಿಕೆ ಮಾಡತೊಡಗಿದರು. ಎಣಿಕೆ ಮಾಡಿದ ನಂತರ ಅಲ್ಲಿಯೇ ನೇತುಹಾಕಿದ್ದ ಪಟ (ಚಾರ್ಟ್)ದಲ್ಲಿ ಬರೆದಿಡುತ್ತಿದ್ದರು.





*ಕೇಸಿಂಗ್ ಮತ್ತು ಕಾಂಪೋಸ್ಟ್ ಅನ್ನು ಬೆರೆಸುತ್ತಿರುವುದು*

## ಅಣಬೆಗಳ ಕುಯಿಲು ಮತ್ತು ತೂಕ ಮಾಡುವ ಕ್ರಿಯೆ

ಅಣಬೆಗಳನ್ನು ಬಿಡಿಸಿದ ಮೇಲೆ ಅದರ ಬೇರುಗಳನ್ನು ತೆಗೆದು ಹಾಕಿದೆವು, ಮಕ್ಕಳಿಗೆ ಹತ್ತಿರದ ಅಂಗಡಿಯಲ್ಲಿ ತೂಕ ಮಾಡಿಸಿ ತನ್ನಿ ಎಂದು ಹೇಳಿದೆವು. ಅವರು ತಿರುಗಿ ಬಂದು 1 ಕೆ.ಜಿ. 650 ಗ್ರಾಮ್ ಇದೆ ಎಂದರು. ಅದಕ್ಕೆ ನಾನು ಅಣಬೆಗಳನ್ನು ಒಯ್ದ ಪಾತ್ರೆಯ ತೂಕವನ್ನು ಅದರಲ್ಲಿ ಕಳೆದಿದ್ದೀರಾ ಎಂದು ವಿಚಾರಿಸಿದಾಗ, ಇಲ್ಲ ಎಂಬ ಉತ್ತರ ಬಂತು. ಇದಾದ ನಂತರ ಮಕ್ಕಳು ಪಾತ್ರೆಯ ತೂಕವನ್ನು ಮಾಡಿ, ಒಟ್ಟೂ ತೂಕದಲ್ಲಿ ಪಾತ್ರೆಯ ತೂಕವನ್ನು ಕಳೆದು, ಅಣಬೆಗಳು 950 ಗ್ರಾಮ್ ಇವೆ ಎಂದು ತಿಳಿಸಿದರು. ಇದರ ನಂತರ ನಾವು ಮಕ್ಕಳಿಗೆ ಒಂದು ಕೆ.ಜಿ.ಯಲ್ಲಿ ಎಷ್ಟು ಗ್ರಾಮ್ ಇರುತ್ತವೆ, ತೂಕ ಮಾಡುವ ಸರಿಯಾದ ಕ್ರಮ ಮತ್ತು ಕೂಡುವಿಕೆ ಹಾಗು ಕಳೆಯುವಿಕೆಯ ಲೆಕ್ಕಾಚಾರ ಮಾಡುವುದನ್ನು ಹೇಳಕೊಟ್ಟೆವು.

## ಅಣಬೆಗಳ ಕುಯಿಲು ಹಾಗು ಅದನ್ನು ಮಧ್ಯಾಹ್ನದ ಬಿಸಿಯೂಟದಲ್ಲಿ ಬಳಸಿದ್ದು

ನಾವು ಅಣಬೆಗಳನ್ನು ಕೊಯ್ಯಬೇಕು ಎಂದು ನಿರ್ಧರಿಸಿದ ದಿನ ಮಕ್ಕಳು ಶಾಲೆಗೆ ನಿಗದಿತ ವೇಳೆಗಿಂತ ಮುಂಚಿತವಾಗಿಯೇ ಬಂದರು. ನಾನು ಅವರಿಗೆ ದೊಡ್ಡದಾಗಿ ಬೆಳೆದು ಕುಯ್ಲಿಗೆ ಸಿದ್ಧವಾಗಿರುವ ಅಣಬೆಗಳನ್ನು ತೋರಿಸಿದೆ. ಅವರು ಬಹಳ ಉತ್ಸುಕರಾಗಿದ್ದರು. ಹತ್ತಿರದ ಅಂಗಡಿಗೆ ಹೋಗಿ ಅಣಬೆಗಳನ್ನು ತೂಕ ಮಾಡಿಸಿದರು ಪಾತ್ರೆಯನ್ನು ಹೊರತುಪಡಿಸಿ ಅಣಬೆಯ ತೂಕ ಎಷ್ಟು ಎಂದು ಲೆಕ್ಕ ಹಾಕಿದರು. ನಂತರ ಅಣಬೆಗಳನ್ನು ಉಪ್ಪು ನೀರಿನಲ್ಲಿ ತೊಳೆದು, ಹೆಚ್ಚಿ ಅಂದಿನ ಬಿಸಿಯೂಟದ ಅಡುಗೆ ಯಲ್ಲಿ ಬಳಸಲು ಕೊಡಲಾಯಿತು. ಇಂದು ಅಣಬೆ ಸಾಂಬಾರು ಎಂದು ಅವರು ಖುಷಿಪಟ್ಟರು

ಮಕ್ಕಳಿಗೆ ಬಡಿಸಿದಾಗ ಅದನ್ನು ಕೆಲವು ಮಕ್ಕಳು ಮಾತ್ರ ತಿಂದರು. ಅಣಬೆಯ ಸಾಂಬಾರು ತಿಂದವರು ಈ ರೀತಿ ಅಭಿಪ್ರಾಯಪಟ್ಟರು.

- ಅದರ ರುಚಿ ಮಾಂಸದಂತೆ ಇದೆ.
- ರಬ್ಬರ್ ತರಹ ಇದೆ.
- ರುಚಿಯಾಗಿದೆ.

ಮಕ್ಕಳಿಗೆ ನಾವು ಭಾಷೆಯ ಪಾಠ ಮಾಡುವಾಗ, ಶಿಕ್ಷಕರಿಗೆ ಪ್ರಶ್ನೆ ಕೇಳಲು ಮಕ್ಕಳನ್ನು ಪ್ರೋತ್ಸಾಹಿಸಬೇಕು ಎಂದು ಹೇಳುತ್ತೇವೆ. ಇಲ್ಲಿ ಆರನೆಯ ತರಗತಿ ಮಕ್ಕಳಷ್ಟೇ ಅಲ್ಲ ಒಂದನೇ ತರಗತಿಯಿಂದ 6ನೇ ತರಗತಿಯವರೆಗೆ ಮಕ್ಕಳು ಅನೇಕಾನೇಕ ಪ್ರಶ್ನೆಗಳನ್ನು ಕೇಳಿದರು. ಕೆಲ ಮಕ್ಕಳು ತಮ್ಮ ಮನೆಯಲ್ಲೇ ಅಣಬೆ ಬೆಳೆಯುವ ಆಶಯ ವ್ಯಕ್ತಪಡಿಸಿದರು. ಕೆಲವು ಮಕ್ಕಳು ಅಣಬೆಯ ಸೇವನೆಯಿಂದ ರೋಗಗಳನ್ನು ಹೊಡೆದೋಡಿಸಲು ಸಾಧ್ಯವೇ ಎಂಬುದನ್ನು ತಿಳಿಯಬಯಸಿದ್ದರು. ಮತ್ತೆ ಕೆಲವು ಮಕ್ಕಳು ವಿಷದ

ಅಣಬೆಗಳನ್ನೂ ಮತ್ತು ಒಳ್ಳೆಯ ಅಣಬೆಗಳನ್ನು ಹೇಗೆ ಗುರುತಿಸಬಹುದು ಎಂದು ಪ್ರಶ್ನಿಸಿದರು.

ಮಕ್ಕಳ ಕೌಟುಂಬಿಕ ಹಿನ್ನಲೆ, ಪ್ರಾದೇಶಿಕ ವಿಶೇಷತೆ, ಭೌಗೋಳಿಕ ಪರಿಸ್ಥಿತಿಗಳಿಗೆ ಅನುಗುಣವಾಗಿ ನಾವು ಅನೇಕ ವಿಧದ ಚಟುವಟಿಕೆಗಳನ್ನು ಆಯ್ಕೆ ಮಾಡಿ ಮಕ್ಕಳ ಪಠ್ಯಕ್ರಮದಲ್ಲಿ ಅಳವಡಿಸಬಹುದು.

## ಕೆಲಸದ ಮೂಲಕ ಶಿಕ್ಷಣ ಹಾಗೂ ಶಿಕ್ಷಕರು ಮತ್ತು ಸ್ನೇಹಿತರೊಡಗಿನ ಸಂಬಂಧ

ಸಾಮಾನ್ಯವಾಗಿ ಮಕ್ಕಳು ಶಿಕ್ಷಕರ ಬಳಿ ತಮ್ಮ ಸಂಶಯಗಳನ್ನು ಕುರಿತು ಪ್ರಶ್ನೆ ಕೇಳಲು ಹಿಂಜರಿಯುತ್ತಾರೆ. ಆದ್ದರಿಂದ ಶಿಕ್ಷಕರ ಮತ್ತು ಮಕ್ಕಳ ಸಂಬಂಧ ಯಾವ ರೀತಿಯದ್ದು ಎಂದು ನಿಶ್ಚಿತವಾಗಿ ಹೇಳುವುದು ಕಷ್ಟಸಾಧ್ಯ. ತಾವು ಕಲಿಯುತ್ತಿರುವ ವಿಷಯಗಳಿಗೆ ಸಂಬಂಧ ಕಲ್ಪಿಸಬಹುದು ಎಂದು ಅನಿಸಿದಾಗ ಮಾತ್ರ, ಮಕ್ಕಳು ಪ್ರಶ್ನೆಗಳನ್ನು ಕೇಳುತ್ತಾರೆ. ಆದರೆ ಕೆಲಸದ ಮೂಲಕ ಶಿಕ್ಷಣದ ಪದ್ಧತಿಯಲ್ಲಿ ಶಿಕ್ಷಕರಿಗೆ ಪ್ರಶ್ನೆಗಳನ್ನು ಕೇಳಲು ಮಕ್ಕಳು ಸ್ವಯಂಪ್ರೇರಿತರಾಗಿ ತರ್ಕಬದ್ಧವಾದ ಪ್ರಶ್ನೆಗಳನ್ನು ರೂಪಿಸುತ್ತಾರೆ. ಏಕೆಂದರೆ ಅವರು ತಮ್ಮ ನಿತ್ಯ ಜೀವನಕ್ಕೆ ಅವುಗಳ ಸಂಬಂಧ ಕಲ್ಪಿಸುತ್ತಾರೆ. ಹೀಗಾಗಿ ಮಕ್ಕಳು ತಮ್ಮ ಸ್ನೇಹಿತರೊಂದಿಗೆ ಇದರ ಬಗ್ಗೆ ಸಂಭಾಷಣೆ ಹಾಗೂ ಚರ್ಚೆಯನ್ನು ಮಾಡುತ್ತಾರೆ.

ಒಮ್ಮೊಮ್ಮೆ ತಮ್ಮ ವಾದವನ್ನು ಪ್ರತಿಪಾದಿಸಲು ಮಕ್ಕಳು ಅನನ್ಯವಾದ ಆಲೋಚನಾ ಸರಣಿಗಳನ್ನು ಮಂಡಿಸುತ್ತಾರೆ. ಉದಾಹರಣೆಗೆ, ಒಂದು ಮಗು ಎಲ್ಲಾ ತರಹದ ಅಣಬೆಗಳು ತಿನ್ನಬಹುದು ಎಂದರೆ ಮತ್ತೊಂದು ಮಗು ಅದಕ್ಕೆ ವ್ಯತಿರಿಕ್ತವಾದ ವಾದ ಮಂಡಿಸುತಿತ್ತು. ತನ್ನ ವಾದವನ್ನು ಸಾಬೀತು ಪಡಿಸಲು ಆ ಮಗು ನಾವು ಎಲ್ಲ ರೀತಿಯ ಅಣಬೆಗಳನ್ನು ತಿನ್ನಬಹುದಾದರೆ, ಮರಗಳ ಮೇಲೆ ಬೆಳೆಯುವ ಅಣಬೆಗಳನ್ನು ಏಕೆ ತಿನ್ನುತ್ತಿಲ್ಲ ಎಂದು ಸವಾಲೊಡ್ಡಿತು. ಹಾಗೆಯೇ ಮಳೆಗಾಲದಲ್ಲಿ ಅಣಬೆಗಳು ತಲೆ ಎತ್ತುತ್ತವೆ ಅವನ್ನೆಲ್ಲ ಏಕೆ ತಿನ್ನುತ್ತಿಲ್ಲ ಎಂದು ಪ್ರಶ್ನಿಸಿತು. ಮಗದೊಂದು ಮಗು ಜನರು ಅಣಬೆಗಳನ್ನು ಕಾಡಿನಿಂದ ಹೆಕ್ಕಿ ತಂದು ತಿನ್ನುತ್ತಾರೆ ಎಂದು ತನ್ನ ವ್ಯಾಖ್ಯೆ ಸೇರಿಸಿತು. ಅದಕ್ಕುತ್ತರವಾಗಿ ಇನ್ನೊಂದು ಮಗು ಒಂದು ಕುಟುಂಬದ ಆರು ಮಂದಿ ಕಾಡಿನಿಂದ ಆರಿಸಿ ತಂದ ಅಣಬೆ ತಿಂದು ಸಾವನ್ನಪ್ಪಿದರು ಎಂದು ತಾನು ವೃತ್ತಪತ್ರಿಕೆಯಲ್ಲಿ ಓದಿ ತಿಳಿದುಕೊಂಡ ಸುದ್ದಿ ಇತರರೊಡನೆ ಹಂಚಿಕೊಂಡಿತು. ಯಾವ ಅಣಬೆ ಸೇವಿಸಲು ಅರ್ಹ ಹಾಗು ಯಾವುದು ಅನರ್ಹ ಎಂಬುದನ್ನು ತಿಳಿದುಕೊಳ್ಳುವುದು ಹೇಗೆ ಎಂದು ಒಂದು ಮಗು ಪ್ರಶ್ನೆ ಒಡ್ಡಿತು. ಅದಕ್ಕೆ ನಾನು ಸೇವಿಸಲು ಅರ್ಹವಾದ ಹಾಗೂ ವಿಷಪೂರಿತ ಅಣಬೆಗಳ ನಡುವೆ ಇರುವ ವ್ಯತ್ಯಾಸವನ್ನು ಕಂಡುಕೊಳ್ಳಬಹುದು ಎಂದು ಅವರಿಗೆ ವಿವರಿಸಿದೆ.

## ಶಿಕ್ಷಣದಲ್ಲಿ ಕೆಲಸ ಮತ್ತು ನಿರಂತರ, ಸಮಗ್ರ ಮೌಲ್ಯ ಮಾಪನ (CCE)

ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ಸದಾ ಚಾಲ್ತಿಯಲ್ಲಿರುವ ಪ್ರಕ್ರಿಯೆ. ಮಕ್ಕಳ ಮೌಲ್ಯಮಾಪನವು ನಿರಂತರವಾಗಿ ನಡೆಯಬೇಕು. ಇದನ್ನು ಕೆಲಸದ ಮೂಲಕ ನೀಡುವ ಶಿಕ್ಷಣ ಕ್ರಮದಲ್ಲಿ ಮಾಡಬಹುದು. ಇಂದು ನಾವು ಮೌಲ್ಯಮಾಪನದ ಬಗ್ಗೆ ಯೋಚಿಸಿದಾಗ ನಮ್ಮ ಮನದಲ್ಲಿ ಹಾದು ಹೋಗುವ ಚಿತ್ರ ಎಂದರೆ, ಮಕ್ಕಳ ಪ್ರಗತಿಯನ್ನು ಪೆನ್ನು ಮತ್ತು ಪೇಪರಿನ ಪರೀಕ್ಷೆ ಮೂಲಕ ಮೌಲ್ಯಮಾಪನ ಮಾಡುವುದು. ನಮಗೆಲ್ಲ ತಿಳಿದಿರುವಂತೆ ಪ್ರತಿಯೊಂದು ಮಗುವಿಗೂ ತನ್ನದೇ ಆದ ಕಲಿಕೆಯ ವಿಧಾನ ಇರುತ್ತದೆ. ಆದರೆ, ನಾವು ಒಂದು ಮಗುವಿನ ಮೌಲ್ಯಮಾಪನವನ್ನು ಕೇವಲ ಅದು ಕಾಗದದ ಮೇಲೆ ಹೇಗೆ ಬರೆದು ತಿಳಿಸುತ್ತದೆ ಎಂಬುದರ ಮೇಲೆ ಮಾಡಿದರೆ, ಅಂತಹ ಮೌಲ್ಯ ಮಾಪನ ನಿಖರವಾಗಿರುವುದಿಲ್ಲ. ಏಕೆಂದರೆ ಕೆಲ ಮಕ್ಕಳಿಗೆ ಕೇವಲ ಬರವಣಿಗೆಯ ಮೂಲಕ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಕೆಲವು ಮಕ್ಕಳು ಮಾತಿನಲ್ಲೋ ಕ್ರಿಯೆಯಲ್ಲೋ ತಮ್ಮ ದಕ್ಷತೆಯನ್ನು ಪ್ರದರ್ಶಿಸುತ್ತಾರೆ. ಕೆಲಸದ ಜೊತೆಜೊತೆಗೆ ಶಿಕ್ಷಣವನ್ನು ನೀಡುವ ಕ್ರಮದಲ್ಲಿ ಮಕ್ಕಳ ಎಲ್ಲ ಮುಖಗಳ ಮೌಲ್ಯಮಾಪನ ಮಾಡಬಹುದು. ಅಂದರೆ, ಮಕ್ಕಳು ತಮ್ಮ ಸಹಪಾಠಿಗಳೊಂದಿಗೆ ಹೇಗೆ ಬೆರೆಯುತ್ತಾರೆ, ಕೆಲಸ ಕಾರ್ಯಗಳಲ್ಲಿ ಭಾಗವಹಿಸುವುದು ಹಾಗು ಜವಾಬ್ದಾರಿ ವಹಿಸಿಕೊಳ್ಳುವ ಪರಿ, ಆಲೋಚನಾ ರೀತಿ ತರ್ಕಬದ್ಧವಾದ ವಿಶ್ಲೇಷಣೆ ಮತ್ತು ಅರ್ಥಮಾಡಿಕೊಳ್ಳುವ ರೀತಿ ಭಾಷಣ ಮತ್ತು ವಾದಮಂಡನಾ ಕಲೆ, ಹೊಸ ವಿಷಯಗಳನ್ನು ಕಲಿಯುವ ಹಂಬಲ, ಸಾಮಾಜಿಕ ಕೌಶಲ್ಯಗಳು, ಗಮನವಿಟ್ಟು ನೋಡುವ ಸಾಮರ್ಥ್ಯ, ತಾವು ಆಯ್ದುಕೊಂಡ ವಿಷಯಗಳೊಡನೆ ಸಂಬಂಧ ಕಲ್ಪಿಸುವ ಸಾಮರ್ಥ್ಯ, ಸಹಕಾರ ಮನೋಭಾವ ಇಂತಹ ಅಂಶಗಳ ಮೌಲ್ಯಮಾಪನ ಕೂಡ ಈ ರೀತಿಯ ಕಲಿಕಾ-ಕ್ರಮದಲ್ಲಿ ಸಾಧ್ಯವಾಗುತ್ತದೆ. ಈ ಚಟುವಟಿಕೆಯನ್ನು ಶಾಲೆಯಲ್ಲಿ ಮಾತ್ರವಲ್ಲದೇ ಮನೆಯಲ್ಲೂ ಮಾಡುವ ಬಗ್ಗೆ ಪೋಷಕರು / ಪಾಲಕರೊಂದಿಗೆ ನಾವು ಮಾತುಕತೆ ನಡೆಸುತ್ತಿದ್ದೇವೆ.

**ಸಹಾಬುದ್ದೀನ್** ಅವರು ಪ್ರಸ್ತುತ ಉಧಾಮ್‌ಸಿಂಗ್ ನಗರದಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್ನಿನ ಸದಸ್ಯರಾಗಿದ್ದಾರೆ. ಇದಕ್ಕೂ ಮೊದಲು, ಇವರು ಫೌಂಡೇಷನ್ನಿನ 'ಕಲಿಕೆ ಖಾತ್ರಿ ಕಾರ್ಯಕ್ರಮ'ದಲ್ಲಿ (ಲರ್ನಿಂಗ್ ಗ್ಯಾರಂಟಿ ಪ್ರೋಗ್ರಾಮ್) ಏರಿಯಾ ಕೋ ಆರ್ಡಿನೇಟರ್ ಆಗಿ ರುದ್ರಪುರದಲ್ಲಿ ಕೆಲಸ ಮಾಡಿದ್ದಾರೆ. ರಾಜ್ಯಶಾಸ್ತ್ರ, ಸಮಾಜ ಶಾಸ್ತ್ರ ಹಾಗೂ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಇವರಿಗೆ ಆಹಾರ ಉದ್ಯಮದಲ್ಲಿ ಒಂದು ದಶಕದ ಅನುಭವ ಇದೆ. ಇದರ ಜೊತೆಗೆ ಶಿಕ್ಷಣ ಕ್ಷೇತ್ರದಲ್ಲಿ ಸಹ ಆರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಸಹಾಬುದ್ದೀನ್ ಅವರನ್ನು sahabuddin.ansari@azimpremjifoundation.org ಮಿಂಚಂಚೆಯ ಮೂಲಕ ಸಂಪರ್ಕಿಸಬಹುದು. **ಅನುವಾದ:** ರಮಾ ಎಂ.ಎನ್. **ಪರಿಶೀಲನೆ:** ಇನಿ ಪೆರಿಯೋಡಿ